**ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ.  731/2022**

| | | | |
|---|---|---|---|
| **ಹೆಸರು** | : | **ಗುಂಡಪ್ಪ** | **ಚಾ.ಸಾ. 13** |
| **ತಂದೆಯ ಹೆಸರು** | : | **ಹವಳಪ್ಪ** | **ಪ್ರಾ.ಸಾ. 4** |
| **ವಯಸ್ಸು** | : | **60 ವರ್ಷ** | **ದಿನಾಂಕಃ 23-07-2025** |
| **ಉದ್ಯೋಗ** | : | **ಕೂಲಿ ಕೆಲಸ** | |
| **ವಾಸಸ್ಥಳ** | : | **ನಾಗಾಇದಲಾಯಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಮೃತ ಸಂಜು ನಮ್ಮ ಊರಿನವರು. ಆರೋಪಿ ನನಗೆ ಗೊತ್ತು. ಆತ ನಮ್ಮ ಊರಿನವನು. ಚಾಸಾ-1ಮತ್ತು 2 ರವರು ನನಗೆ ಗೊತ್ತು. ಚಾಸಾ-6 ರಿಂದ 9ರವರು ನಮ್ಮ ಊರಿನವರು. ಚಾಸಾ-11, 12, 14 ರಿಂದ 16 ನಮ್ಮ ಊರಿನವರು.

ಈಗ ನೋಡುತ್ತಿರುವ ನಿಪಿ-2 ಭಾವಚಿತ್ರದಲ್ಲಿ ನಾನು ಇದ್ದೇನೆ. ಈಗ 3 ವರ್ಷಗಳ ಹಿಂದೆ ನಾಗಾಇದಲಾಯಿ ರಸ್ತೆ ಮೇಲೆ ಅಪಘಾತವಾಗಿದೆ ಎಂದು ತೋರಿಸು ಎಂದು ಹೇಳಿ ಪೋಲಿಸರು ಭಾವಚಿತ್ರವನ್ನು ಪಡೆದಿರುತ್ತಾರೆ. ನಾನು ಅಪಘಾತವಾನ್ನು ನೋಡಿಲ್ಲ ಮತ್ತು ಪೋಲಿಸರು ಸಹಿ ಮಾಡು ಎಂದು ಹೇಳಿದಕ್ಕೆ ಸಹಿ ಮಾಡಿದ್ದೇನೆ. ಮೃತ ಸಂಜುರವರು ಅಪಘಾತದಲ್ಲಿ ಮೃತ ಪಟ್ಟಿರುತ್ತಾರೆ ಎಂದು ನನಗೆ ಗ್ರಾಮಸ್ದರಿಂದ ಗೊತ್ತಾಗಿರುತ್ತದೆ. ಪೋಲಿಸರಿಗೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ  ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಆಗ ಪೋಲಿಸರು ಪಂಚನಾಮೆ ಮಾಡಿಕೊಂಡು ಭಾವಚಿತ್ರ ಪಡೆದಿರುತ್ತಾರೆ ಎಂದರೆ ಸರಿ. ಈಗ 3 ವರ್ಷಗಳ ಹಿಂದೆ ನಾನು ಶ್ರೀನಿವಾಸರವರ ಹೊಲದಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಆಗ ಒಂದು ಟ್ರಾಕ್ಟರ ವೇಗವಾಗಿ ಹೋಗುತ್ತಿತ್ತು ಎಂದರೆ ಸರಿಯಲ್ಲ. ಟ್ರಾಕ್ಟರನ್ನು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿ ಸದರಿ ಟ್ರಾಕ್ಟರ ಹೋಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸ್ಥಳದಲ್ಲಿ ಸಂಜು ಮೃತ ಪಟ್ಟಿದ್ದ ಎಂದರೆ ಸರಿ. ನಂತರ ಸ್ಥಳದಲ್ಲಿ ಮೃತಪಟ್ಟ ವ್ಯಕ್ತಿಯ ಸಂಬಂಧಿಕರು ಬಂದಿದ್ದರು ಎಂದರೆ ಸರಿ. ಆಗ ಸ್ಥಳದಲ್ಲಿ

ಚಾಸಾ-1ರವರಿಗೂ ಸಹ ಗಾಯಗಳಾಗಿದ್ದವು ಎಂದರೆ ಸರಿ. ಸದರಿ ಟ್ರಾಕ್ಟರ ನರಸರೆಡ್ಡಿರವರ ಟ್ರಾಕ್ಟರ ಇತ್ತು ಎಂದರೆ ಸರಿ. ಆಗ ನಾನು ಟ್ರಾಕ್ಟರ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ ಎಂದು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಆರೋಪಿಯನ್ನು ನನಗೆ ತೋರಿಸಿರುತ್ತಾರೆ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡುವುದಿಲ್ಲ. ಆರೋಪಿಯ ತಪ್ಪಿನಿಂದ ಅಪಘಾತವಾಗಿದೆ ಎಂದು ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಭಾವಚಿತ್ರದಲ್ಲಿರುವ ಟ್ರಾಕ್ಟರಗಳನ್ನು ನೋಡಿದ್ದೇನೆ. ವಾಹನವನ್ನು ನಾನು ನೊಡಿಲ್ಲ. ಆರೋಪಿ ಈಗ ನೋಡುತ್ತಿರುವ ಭಾವಚಿತ್ರದಲ್ಲಿರುವ ಸದರಿ ಭಾವಚಿತ್ರಗಳನ್ನು ನಿಪಿ-6 ರಿಂದ 9 ಎಂದು ಗುರುತಿಸಲಾಯಿತು. ಉಳಿದ ಭಾವಚಿತ್ರಗಳಲ್ಲಿರುವ ದ್ವಿಚಕ್ರ ವಾಹನವನ್ನು ನಾನು ನೋಡಿಲ್ಲ. ಆರೋಪಿ ನಿಪಿ-6 ರಿಂದ 9 ರ ಟ್ರಾಕ್ಟರನ್ನು ವೇಗವಾಗಿ ಚಲಾಯಿ ಅಪಘಾತ ಪಡಿಸಿರುತ್ತಾನೆ ಎಂದು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರು ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ MDA ವಕೀಲರಿಂದಃ</u>**

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ. ಪೋಲಿಸರಿಗೆ ನಾನು ಹೇಳಿಕೆಯನ್ನು ನೀಡಿಲ್ಲ ಮತ್ತು ಪೊಲೀಸರು ತಾವೇ ಹೇಳಿಕೆಯನ್ನು ಬರೆದುಕೊಂಡಿದ್ದಾರೆ ಎಂದರೆ ಸರಿ. ಭಾವಚಿತ್ರವನ್ನು ಯಾವ ಕಾರಣಕ್ಕಾಗಿ ಪಡೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಯಾವುದೇ ಸ್ಥಳವನ್ನು ಪೋಲಿಸರಿಗೆ ತೋರಿಸಿಲ್ಲ ಎಂದರೆ ಸರಿ. ನಿಪಿ-6 ರಿಂದ 9 ರ ಭಾವಚಿತ್ರದಲ್ಲಿರುವ ಕೆಂಪು ಟ್ರಾಕ್ಟರಗಳು ನಮ್ಮ ಊರಿನಲ್ಲಿ ಬಹಳಷ್ಟು ಇವೆ ಎಂದರೆ ಸರಿ. ಸದರಿ ಟ್ರಾಕ್ಟರ ಸಂಖ್ಯೆ ನನಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ಆ ದಿನ ಟ್ರಾಕ್ಟರ ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಘಟನೆ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**